ಸರ್ಕಾರಿ ಆದೇಶ ಸಂಖ್ಯೆ: ಅಪಜೀ 50 ಎಫ್‌ಎಪಿ 2000, ದಿನಾಂಕ: 19–06–2002ರಂತೆ ನೆಡುತೋಪು ಕಡಿತಲೆಯಿಂದ ಮಾರಾಟದಿಂದ ಬಂದ ಆದಾಯವನ್ನು ಸರ್ಕಾರ ಹಾಗೂ ಗ್ರಾಮ ಅರಣ್ಯ ಸಮಿತಿ ನಡುವೆ ಹಂಚಿಕೆ ಮಾಡುವುದು.

ನೆಡುತೋಪುಗಳಿಂದ ದೊರೆಯುವ ಹುಲ್ಲು, ಎಲೆಗಳು ಹಾಗೂ ರೆಂಬೆ–ಕೊಂಬೆಗಳನ್ನು ಉಚಿತವಾಗಿ ಅಲ್ಲದೆ ಹಣ್ಣು–ಹಂಪಲುಗಳು ಸೌದೆ, ಪೋಲ್ಸ್ ಇತ್ಯಾದಿಗಳನ್ನು ರಿಯಾಯಿತಿ ದರದಲ್ಲಿ ಗ್ರಾಮ ಅರಣ್ಯ ಸಮಿತಿ ಸದಸ್ಯರು ಪಡೆಯುವ ಅವಕಾಶವಿರುತ್ತದೆ.

ಅಲ್ಲದೇ, ಕಿರು ಅರಣ್ಯ ಉತ್ಪನ್ನದಿಂದ ಬಂದ ಆದಾಯವನ್ನು ಸಹ ಗ್ರಾಮ ಅರಣ್ಯ ಸಮಿತಿಗೆ ಮೇಲಿನ ಸರ್ಕಾರದ ಆದೇಶದಂತೆ ಹಂಚಿಕೆ ಮಾಡಲಾಗುವುದು.

ಕಾಡಾನೆ ಹಾವಳಿ

3146 (3079); ಶ್ರೀ ಕುಮಾರಸ್ವಾಮಿ ಎಚ್.ಕೆ (ಸಕಲೇಶಪುರ)

ಅ) ಆಲೂರು ಮತ್ತು ಸಕಲೇಶಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಸರ್ಕಾರದ ಆದೇಶದಂತೆ 25 ಕಾಡಾನೆಗಳನ್ನು ಹಿಡಿಯದಿರುವುದು ನಿಜವೇ;

ಆ) ಕಾಡಾನೆಗಳ ಸಂಖ್ಯೆ ಇಮ್ಮಡಿಯಾಗುತ್ತಿದ್ದು, ಈ ಭಾಗದಲ್ಲಿ ಪ್ರಾಣಹಾನಿ ಮತ್ತು ಬೆಳೆ ಹಾನಿ ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಸರ್ಕಾರ ಆನೆಧಾಮ ಅಥವಾ ಕಾರಿಡಾರ್ ರಚಿಸುವ ನಿರ್ಧಾರ ಮಾಡಿದೆಯೇ;

ಈ) ಈ ಭಾಗಗಳಿಗೆ ಸೋಲಾರ್ ಬೇಲಿ ನಿರ್ಮಿಸುವುದಕ್ಕಾಗಿ ಸರ್ಕಾರವು ಬಿಡುಗಡೆ ಮಾಡಿದ ಹಣವೆಷ್ಟು?

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಆಲೂರು, ಅರಕಲಗೂಡು ಮತ್ತು ಸಕಲೇಶಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಸಾರ್ವಜನಿಕರ ಆಸ್ತಿಪಾಸ್ತಿ ನಷ್ಟ ಮತ್ತು ಪ್ರಾಣ ಹಾನಿ ಉಂಟು ಮಾಡುತ್ತಿದ್ದ 25 ಕಾಡಾನೆಗಳನ್ನು ಸೆರೆಹಿಡಿದು ಸ್ಥಳಾಂತರಿಸಲು ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ 14029/2008ರ ಆದೇಶದ ಪ್ರಕಾರ ಒಟ್ಟು 22 ಕಾಡಾನೆಗಳನ್ನು ಸೆರೆಹಿಡಿದು ಇಲಾಖೆಯ ವಿವಿಧ ಆನೆ ಶಿಬಿರಗಳಿಗೆ ಮತ್ತು ಅರಣ್ಯ ಪ್ರದೇಶಕ್ಕೆ ಬಿಡಲಾಗಿರುತ್ತದೆ.

ಆ) ಹೌದು.

ಇ) ಇಲ್ಲ

ಈ) ಕಾಡಾನೆಗಳ ಹಾವಳಿ ತಡೆಗಟ್ಟಲು ಯಸಳೂರು ವಲಯದ ಪಣಗೂರು ಬಿಸ್ಲೆಗಾಟ್ ವರೆಗೆ 9.5 ಕಿ.ಮೀ. ಸೌರ ಬೇಲಿ ನಿರ್ಮಾಣ ಮಾಡಲಾಗಿದೆ. ಇಲ್ಲಿಯವರೆಗೆ ಸೋಲಾರ್ ಬೇಲಿ ನಿರ್ಮಿಸಲು 16.70 ಲಕ್ಷ ವೆಚ್ಚ ಮಾಡಲಾಗಿರುತ್ತದೆ.

ಪೋಡಿ ಪ್ರಕರಣಗಳು

3148 (4067); ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಮಧುಗಿರಿ)

ಅ) ಮಧುಗಿರಿ ತಾಲ್ಲೂಕಿನಲ್ಲಿ ಪೋಡಿಗಾಗಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು ಹಾಗೂ ಎಷ್ಟು ಪೋಡಿ ಪ್ರಕರಣಗಳು ಬಾಕಿ ಇವೆ;

ಆ) ಹಾಗಿದ್ದಲ್ಲಿ, ಪೋಡಿ ಪ್ರಕರಣಗಳನ್ನು ಶೀಘ್ರ ಇತ್ಯರ್ಥಪಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು: ಕೈಗೊಳ್ಳದಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು (ವಿವರ ನೀಡುವುದು)?